# ಕನ್ನಡ ಪೋಸ್ಟ್

KANNADA POST | ಇದು ಸುದ್ದಿ ವಿಲಾಸ | ಕನ್ನಡ ದಿನಪತ್ರಿಕೆ

ಸಂಪಾದಕ : ಮಂಜು ಬನವಾಸೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.02 | Issue. 76 | Pages. 2 | Date: 20-02-2026, FRIDAY | RNI NO: KARKAN/2024/89601 | Kannada Daily

ಸಂಪುಟ : 02 - ಸಂಚಿಕೆ : 76 - ಪುಟಗಳು : 2 | 20-02-2026 ಶುಕ್ರವಾರ | Ph: 8762954248 | ದರ : ₹1


# ಪೋಷಕರ ಅತಿಯಾದ ನಿರೀಕ್ಷೆ ಮಕ್ಕಳ ಮೇಲೆ ಪರಿಣಾಮ

## ಮಾನಸಿಕ ಖಿನ್ನತೆಗೆ ಒತ್ತಡ ಕಾರಣ | ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ಸದಸ್ಯ ವೆಂಕಟೇಶ್

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಯುವ ಜನರಿಗೆ ಪೋಷಕರ ಅತಿಯಾದ ನಿರೀಕ್ಷೆ ಕಾಡುತ್ತಿದೆ. ಪೋಷಕರು ನಮ್ಮ ಮಕ್ಕಳು ಫಸ್ಟ್ ರ್‍ಯಾಂಕ್ ಬರಬೇಕು, ಡಾಕ್ಟರ್ ಆಗಬೇಕು, ಇಂಜಿನಿಯರ್ ಆಗಬೇಕು ಎಂಬ ಮನೋಭಾವದಿಂದ ಓದಲು ಹೆಚ್ಚು ಒತ್ತಡ ಹಾಕುತ್ತಿದ್ದಾರೆ. ಇದೊಂದು ರೀತಿಯಲ್ಲಿ ಮಕ್ಕಳು ಖಿನ್ನತೆಗೆ ಒಳಗಾಗಲು ಕಾರಣವಾಗುತ್ತಿದೆ ಎಂದು ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ವೆಂಕಟೇಶ್ ಹೇಳಿದರು.



ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ, ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ಮಕ್ಕಳ ರಕ್ಷಣಾ ಘಟಕದಿಂದ ನಗರದ ಸಂತ ಜೋಸೆಫ್‌ರ ಶಾಲೆಯಲ್ಲಿ ಗುರುವಾರ ಆಯೋಜಿಸಿದ್ದ ತರಬೇತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಖಿನ್ನತೆಗೆ ಒಳಗಾಗುವ ಮಕ್ಕಳು ನಕಾರಾತ್ಮಕ ಚಿಂತನೆ ಬೆಳಸಿಕೊಳ್ಳುವುದು, ದುಶ್ಚಟಗಳಿಗೆ ಒಳಗಾಗುವುದು ಕೆಲವರಲ್ಲಿ ಕಂಡು ಬರುತ್ತಿದೆ. ಪೋಷಕರು ತಮ್ಮ ನಿರೀಕ್ಷೆಯ ಭಾರವನ್ನು ಮಕ್ಕಳ ಮೇಲೆ ಹೇರದೆ ಸಹಜವಾಗಿ ಕಲಿಯಲು ಬಾಲ್ಯ ಅನುಭವಿಸಲು ನೆರವಾಗಬೇಕು ಎಂದರು. ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಜಿ.ಕೆ.ದಾಕ್ಷಾಯಿಣಿ ಮಾತನಾಡಿ, ಹದಿಹರೆಯದ ಮಕ್ಕಳ ಜೀವನದ ಅತ್ಯಂತ ಪ್ರಮುಖ ಘಟ್ಟವಾಗಿದ್ದು, ದೈಹಿಕ, ಮಾನಸಿಕ, ಬೌದ್ಧಿಕ, ಭಾಷೆ ಮತ್ತು ಸಾಮಾಜಿಕ ಬೆಳವಣಿಗೆಗಳಾಗುತ್ತದೆ. ದೇಹದಲ್ಲಿ ಹಾರ್ಮೋನ್ ಉತ್ಪತ್ತಿಯಾಗುತ್ತದೆ. ಮಕ್ಕಳು ಯೌನಸ್ತರಾಗಿ ರೂಪುಗೊಳ್ಳುತ್ತಾರೆ. ಈ ಸಂದರ್ಭದಲ್ಲಿ ಅವರಿಗೆ ಸೂಕ್ತ ಪೋಷಣೆ, ಖಾಳಜಿ, ಆರೈಕೆ ದೊರೆಯಬೇಕು ಹದಿಹರೆಯದಲ್ಲಿ ನಡೆಯುವ ನೈಸರ್ಗಿಕ ಬದಲಾವಣೆಗಳಿಂದ ಗಂಡು-ಹೆಣ್ಣು ಮಕ್ಕಳು ಆಕರ್ಷಣೆಗೆ ಒಳಗಾಗುತ್ತಾರೆ. ಇದನ್ನ ಪ್ರೀತಿ-ಪ್ರೇಮ ಎಂದು ಪರಿಭಾವಿಸಿ ಮೊಬೈಲ್‌ನಲ್ಲಿ ಹರಟುವುದು, ಕಾಲಹರಣ ಮಾಡುವುದು ಶಾಲೆ ಬಿಟ್ಟು ತಿರುಗಲು ಕಾರಣವಾಗುತ್ತದೆ ಎಂದರು.

ಸಾಮಾಜಿಕ ಜಾಲತಾಣಗಳು ಮತ್ತು ಮಾಧ್ಯಮಗಳ ಪ್ರಭಾವಗಳಿಂದ ಮಕ್ಕಳು ಬಹುಬೇಗನೆ ನಕಾರಾತ್ಮಕ ಅಂಶಗಳ ಅನುಕರಣೆ, ಆಲೋಚನೆಗಳಿಗೆ ಅಲ್ಲದೆ ಕೆಲವು ಚಟಗಳಿಗೆ ಒಳಗಾಗುವುದು ಜಾಸ್ತಿಯಾಗುತ್ತದೆ. ಆದ್ದರಿಂದ ಯುವ ಜನತೆ ಭವಿಷ್ಯದಲ್ಲಿ ಗಂಭೀರ ಪರಿಣಾಮ ಎದುರಿಸಬೇಕಾಗುತ್ತದೆ ಎಂದು ತಿಳಿಸಿದರು.

ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಕೆ.ಜಿ.ದಿಲೀಪ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಂಪನ್ಮೂಲ ವ್ಯಕ್ತಿ ಕಾಂತರಾಜು ತರಬೇತಿ ನೀಡಿದರು. ಅತಿಥಿಗಳಾಗಿ ಪೆನ್‌ಷನ್ ಮೊಹಲ್ಲಾ ಠಾಣೆಯ ಆರಕ್ಷಕ ನಿರೀಕ್ಷಕ ಸ್ವಾಮಿನಾಥ ಹಾಗೂ ಮತ್ತಿತರರು ಉಪಸ್ಥಿತರಿದ್ದರು.

# ಸಿವಿಲ್ ನ್ಯಾಯಾಧೀಶರಾಗಿ ಜಿಲ್ಲೆಯ ಮೂವರು ಆಯ್ಕೆ



Koushal K B | Shwetha H E | Manikanta M S

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಇತ್ತೀಚೆಗೆ ಪ್ರಕಟವಾದ ಸಿವಿಲ್ ನ್ಯಾಯಾಧೀಶರ ಪರೀಕ್ಷೆಯಲ್ಲಿ ನಗರದ ಎಂ.ಕೃಷ್ಣ ಕಾನೂನು ಕಾಲೇಜಿನ ಮೂವರು ಹಳೆಯ ವಿದ್ಯಾರ್ಥಿಗಳು ಆಯ್ಕೆಯಾಗಿದ್ದಾರೆ.

ಕೆ.ಬಿ.ಕೌಶಲ್, ಎಂ.ಎಸ್.ಮಣಿಕಂಠ ಮತ್ತು ಹೆಚ್.ಇ.ಶ್ವೇತಾ ಮೂವರೂ ಸಿವಿಲ್ ನ್ಯಾಯಾಧೀಶರಾಗಿ ಆಯ್ಕೆಯಾಗಿದ್ದಾರೆ. ಅವರಿಗೆ ಕಾಲೇಜಿನ ಬೋಧಕ, ಬೋಧಕೇತರ ಸಿಬ್ಬಂದಿ ಮತ್ತು ಆಡಳಿತ ಮಂಡಳಿ ಅಭಿನಂದನೆ ತಿಳಿಸಿದ್ದಾರೆ. ಒಂದೇ ಪ್ರಕಟಣೆಯಲ್ಲಿ ಮೂವರು ಆಯ್ಕೆಯಾಗುವುದು ವಿಶೇಷ ಸಂದರ್ಭವಾಗಿದ್ದು ಅವರ ಪರಿಶ್ರಮ, ನಿರಂತರ ಅಧ್ಯಯನಕ್ಕೆ ಯಶಸ್ಸು ಸಿಕ್ಕಿದೆ. ಆ ಮೂಲಕ ಜಿಲ್ಲೆಯ ಕೀರ್ತಿಯೂ ಉತ್ತುಂಗಕ್ಕೇರಿದೆ.

# ಕರವೇ ಪ್ರತಿಭಟನೆ: ತಾ.ಪಂ. ವಾಣಿಜ್ಯ ಮಳಿಗೆಗಳಿಗೆ ಬೀಗ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೇಲೂರು: ತಾಲೂಕು ಪಂಚಾಯಿತಿಗೆ ಸೇರಿದ ವಾಣಿಜ್ಯ ಮಳಿಗೆಗಳ ಬಾಡಿಗೆ ಅವಧಿ ಮುಗಿದಿದ್ದರೂ ತೆರವುಗೊಳಿಸದೆ ಪುರಸಭೆ ಕರ್ತವ್ಯ ಲೋಪ ಎಸಗಿದೆ ಎಂದು ಆರೋಪಿಸಿ ಕರ್ನಾಟಕ ರಕ್ಷಣಾ ವೇದಿಕೆ ಕಾರ್ಯಕರ್ತರು (ನಾರಾಯಣ ಗೌಡ ಬಣ) ಗುರುವಾರ ತಾಲೂಕು ಪಂಚಾಯಿತಿ ಕಚೇರಿಗೆ ಬೀಗ ಹಾಕಿ ಪ್ರತಿಭಟನೆ ನಡೆಸಿದರು.



ಪ್ರತಿಭಟನಾಕಾರರ ಆಕ್ರೋಶಕ್ಕೆ ಮಣಿದ ತಾಪಂ ಇಒ ಸತೀಶ್ ಕುಮಾರ್ ಅವರು ಸಾರ್ವಜನಿಕರ ಸಮ್ಮುಖದಲ್ಲೇ ಎಲ್ಲ ವಾಣಿಜ್ಯ ಮಳಿಗೆಗಳಲ್ಲಿದ್ದ ಸಾಮಾನು ಸರಂಜಾಮುಗಳಿದ್ದಾಗಲೇ ಬೀಗ ಜಡಿದು ಸೀಲ್ ಹಾಕಿಸಿದರು.

ಕರವೇ ತಾಲೂಕು ಅಧ್ಯಕ್ಷ ಚಂದ್ರಶೇಖರ್ ಮಾತನಾಡಿ, ಪಟ್ಟಣದ ತಾಪಂ ಕಚೇರಿಗೆ ಸೇರಿದ ವಾಣಿಜ್ಯ ಮಳಿಗೆಗಳ ಹರಾಜು ಪ್ರಕ್ರಿಯೆಯಿಂದ ಸರ್ಕಾರಕ್ಕೆ ಕೋಟ್ಯಾಂತರ ರೂ. ನಷ್ಟವಾಗಿರುವುದು ಸ್ಪಷ್ಟವಾಗಿದೆ. ಇಲ್ಲಿ ಅಧಿಕಾರಿಗಳು ಜನಪ್ರತಿನಿಧಿಗಳ ಒತ್ತಾಯಕ್ಕೆ ಮಣಿದು ಮಳಿಗೆ ಬಾಡಿಗೆದಾರರೊಂದಿಗೆ ಶಾಮೀಲಾಗಿ ಮಳಿಗೆಗಳನ್ನು ತೆರೆವುಗೊಳಿಸದೆ ಅಕ್ರಮದಲ್ಲಿ ಭಾಗಿಯಾಗಿದ್ದಾರೆ. ಸರ್ಕಾರಿ ಆಸ್ತಿ ರಕ್ಷಿಸಬೇಕಾದ ಅಧಿಕಾರಿಗಳೇ ಇಲ್ಲಿ ವ್ಯವಸ್ಥೆ ಹಾಳು ಮಾಡುತ್ತಿದ್ದಾರೆ. ಮತ್ತು ಮಳಿಗೆಯಲ್ಲಿರುವ ಬಾಡಿಗೆದಾರರು ನ್ಯಾಯಾಲಯಕ್ಕೆ ಹೋಗಿದ್ದರು. ಅಲ್ಲಿಯೂ ಇವರ ಅರ್ಜಿ ವಜಾಗೊಂಡಿತ್ತು. ನಂತರ ಹೈಕೋರ್ಟ್ ಮೊರೆ ಹೋದರೂ ಅಲ್ಲಿಯೂ ತಾಪಂ ಅಧಿಕಾರಿಗಳು ವಾಣಿಜ್ಯ ಮಳಿಗೆಗಳನ್ನು ಸ್ವಾಧೀನ ಪಡಿಸಿಕೊಳ್ಳಲು ನ್ಯಾಯಾಲಯ ಆದೇಶಿಸಿದ್ದರೂ ಅಧಿಕಾರಿಗಳು ಮಳಿಗೆ ಖಾಲಿ ಮಾಡಿಸಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು. ತಾಲೂಕು ಪ್ರಧಾನ ಕಾರ್ಯದರ್ಶಿ ಅಬ್ದುಲ್‌ಮಾತನಾಡಿ, ತಾಲೂಕು ಪಂಚಾಯಿತಿ ಮಳಿಗೆಗಳ ವಿಚಾರದಲ್ಲಿ ಭಾರಿ ಭ್ರಷ್ಟಾಚಾರ ನಡೆದಿರುವ ಬಗ್ಗೆ ತಾಪಂ ಇಒ ಜತೆ ಮಾತನಾಡಿದ ಸಂದರ್ಭ ಅವರು ಬಾಡಿಗೆದಾರರಿಂದ ಬಾಡಿಗೆ ಬಾಕಿ ಇದೆ. ಅದನ್ನು ಕಟ್ಟಿಸಿಕೊಂಡು ಖಾಲಿ ಮಾಡಿಸುತ್ತೇವೆ ಎಂದಿದ್ದರು. ಮತ್ತು ನ್ಯಾಯಾಲಯ ತಾಪಂ ಅಧಿಕಾರಿಗೆ ಅಧಿಕಾರ ನೀಡಿ ನೀವೇ ಮಳಿಗೆದಾರರೊಂದಿಗೆ ಚರ್ಚಿಸಿ ಅವರಿಗೆ 45 ದಿನ ಕಾಲಾವಕಾಶ ನೀಡಿ ತೆರವುಗೊಳಿಸಿ ಎಂದಿದ್ದರೂ ಸಹ ಅವಧಿ ಮುಗಿದಿದ್ದರೂ ಕ್ರಮ ಕೈಗೊಳ್ಳದೆ, ಅಧಿಕಾರಿಗಳು ಮಳಿಗೆಯವರೊಂದಿಗೆ ಶಾಮೀಲಾಗಿ ಬಾಡಿಗೆದಾರರನ್ನು ತೆರವುಗೊಳಿಸಿಲ್ಲ. ಆದ್ದರಿಂದ ಎಲ್ಲ ಮಳಿಗೆಯವರನ್ನು ತೆರವುಗೊಳಿಸಿ ಮರು ಹರಾಜು ಮಾಡಬೇಕು ಇಲ್ಲದಿದ್ದಲ್ಲಿ ಉಗ್ರವಾದ ಪ್ರತಿಭಟನೆಗೆ ಮುಂದಾಗಬೇಕಾಗುತ್ತದೆ ಎಂದರು. ಕರವೇ ಗೌರವಾಧ್ಯಕ್ಷ ತಾರಾನಾಥ್, ಕೋಗಿಲಮನೆ ಕುಮಾರ್, ಉಪಾಧ್ಯಕ್ಷ ಚಂದ್ರೇಗೌಡ, ಪ್ರಸನ್ನ ಹೊಸಳ್ಳಿ, ಅನೀಫ್, ನಗರಾಧ್ಯಕ್ಷ ಪ್ರಸನ್ನ, ಮುಖಂಡರಾ ಆನಂದ್, ಚಂದ್ರು, ಯೋಗೀಶ್, ಶ್ರೀಧರ್, ಅನೀಫ್, ಗಂಗರಾಜು ಹಾಗೂ ತಾಪಂ ಸಿಬ್ಬಂದಿ ನಂದಕುಮಾರ್, ಮಂಜುನಾಥ್ ಸೇರಿದಂತೆ ಇತರರಿದ್ದರು.

# ಪರಿಪೂರ್ಣ ಜೀವನಕ್ಕಾಗಿ ಶಿವನ ಪೂಜಿಸಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ದೇವರನ್ನು ಕಾಟಾಚಾರಕ್ಕೆ ಪೂಜೆ ಮಾಡದೆ ಭಕ್ತಿಯಿಂದ ಪೂಜೆ ಮಾಡಬೇಕು. ಜೀವನ ಪರಿಪೂರ್ಣವಾಗಬೇಕೆಂದರೆ ದೇವರ ಮೊರೆ ಹೋಗಬೇಕು ಎಂದು ರಾಜ ಯೋಗಿಣಿ ಆಶಾಕ್ಕ ಹೇಳಿದರು.



ಪಟ್ಟಣದಲ್ಲಿ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರಿ ವಿಶ್ವವಿದ್ಯಾಲಯ ವತಿಯಿಂದ ಶಿವರಾತ್ರಿ ಅಂಗವಾಗಿ ನಗರದ ಲಯನ್ಸ್ ಹಾಲ್‌ನಲ್ಲಿ ಆಯೋಜಿಸಿದ್ದ ವಿಶೇಷ ಕಾರ್ಯಕ್ರಮದಲ್ಲಿ ಮಾತನಾಡಿ ನಾವು ವರ್ಷದಲ್ಲಿ ಒಂದೇ ದಿನ ಶಿವರಾತ್ರಿ ಆಚರಿಸುತ್ತೇವೆ. ಆದರೆ ಶಿವರಾತ್ರಿ ಎಂದರೆ ಕೇವಲ ಒಂದು ದಿನದ ಆಚರಣೆ ಅಲ್ಲ. ಅದು ಜೀವನಪೂರ್ತಿ ಜಾಗೃತಿಯ ಸಂಕೇತವಾಗಬೇಕು ಎಂದರು. ವನಮಹೋತ್ಸವದಂದು ಗಿಡ ನೆಡುವ ಮೂಲಕ ಪರಿಸರ ಸಂರಕ್ಷಣೆ ಸಂದೇಶ ನೀಡುತ್ತೇವೆ. ಆದರೆ ಉಳಿದ ದಿನಗಳಲ್ಲಿಯೂ ಪರಿಸರದ ಜವಾಬ್ದಾರಿ ನಮ್ಮದಾಗಿರಬೇಕು. ಅದೇ ರೀತಿ ಕ್ಯಾನ್ಸರ್ ದಿನಾಚರಣೆ ಆರೋಗ್ಯ ಜಾಗೃತಿಗೆ ಸಾಂಕೇತಿಕ ದಿನ ಮಾತ್ರ. ಜೀವನ ಶೈಲಿಯಲ್ಲಿ ಶಾಶ್ವತ ಬದಲಾವಣೆ ಅಗತ್ಯ ಎಂದು ಅಭಿಪ್ರಾಯಪಟ್ಟರು.

ಹಬ್ಬ ಆಚರಿಸಲು ದುಡ್ಡು ಮುಖ್ಯವಲ್ಲ, ಮನಸ್ಸು ಮುಖ್ಯ. ಒಂದು ದಿನದ ಹಬ್ಬಕ್ಕಿಂತ ಜೀವನಪೂರ್ಣ ಶುದ್ಧತೆ, ಸತ್ಕಾರ್ಯ ಮತ್ತು ಆತ್ಮಪರಿಶೀಲನೆ ಮುಖ್ಯ. ಇಂದಿನ ತಂತ್ರಜ್ಞಾನ ಯುಗದಲ್ಲಿ ಮೊಬೈಲ್ ಮತ್ತು ಗೂಗಲ್ ಮೂಲಕ ಶಿವರಾತ್ರಿಯ ಬಗ್ಗೆ ಅನೇಕ ಮಾಹಿತಿಗಳು ದೊರೆಯುತ್ತವೆ. ಆದರೆ ಅದರ ನಿಜವಾದ ಅರ್ಥವನ್ನು ಅರಿತು ಜೀವನದಲ್ಲಿ ಅಳವಡಿಸಿಕೊಳ್ಳುವುದು ಮುಖ್ಯ. ಶಿವರಾತ್ರಿ ಎಂದರೆ ಶಿವನಿಗೆ ರಾತ್ರಿ ಅಲ್ಲ. ಅಜ್ಞಾನ ಅಂಧಕಾರವನ್ನು ದೂರ ಮಾಡುವ ಆತ್ಮಜಾಗೃತಿ. ಉಪವಾಸ ಮತ್ತು ಜಾಗರಣೆ ಕೇವಲ ಶಾರೀರಿಕ ಕ್ರಮವಾಗಬಾರದು, ನಿಜವಾದ ಜಾಗರಣೆ ಅಂದರೆ ಆತ್ಮ ಜ್ಞಾನದಲ್ಲಿ ಎಚ್ಚರವಾಗಿರುವುದು. ದೇವಾಲಯ ಸುತ್ತಾಟ ಅಥವಾ ಸಿನಿಮಾಗಳನ್ನು ನೋಡುವ ಮೂಲಕ ರಾತ್ರಿಯೆಲ್ಲ ಜಾಗರಣೆ ಮಾಡುವುದಕ್ಕಿಂತ ಆತ್ಮಪರಿವರ್ತನೆ ಮುಖ್ಯವಾಗಿದೆ. ಆಚರಣೆ ನೆಪಕ್ಕಾಗಿ ಆಗಬಾರದು. ಆತ್ಮಪರಿಶೀಲನೆಗಾಗಿ ಆಗಬೇಕು ಎಂದರು. ಹಿಂದು ಮುಖಂಡ ರಘು ಮಾತನಾಡಿ, ಧರ್ಮದ ಪುನರ್ ಸ್ಥಾಪನೆ ಕುರಿತು ಭಗವದ್ಗೀತೆಯಲ್ಲೇ ಉಲ್ಲೇಖವಾಗಿದೆ. ದುಷ್ಟರ ಶಿಕ್ಷೆ ಹಾಗೂ ಶಿಷ್ಟರ ರಕ್ಷಣೆಗಾಗಿ ಭಗವಂತನು ಪ್ರತಿ ಯುಗದಲ್ಲೂ ಆವತರಿಸುತ್ತಾನೆ. ಕಲಿಯುಗದಲ್ಲಿ ಈ ಕಾರ್ಯ ಸಂಘಟನೆ ಶಕ್ತಿಯಿಂದ ನಡೆಯುತ್ತದೆ. ಬ್ರಹ್ಮಕುಮಾರಿ ಸಂಸ್ಥೆಯಂತಹ ಸಂಘಟನೆಗಳು ಸಮಾಜ ಜಾಗೃತಿಯಲ್ಲಿ ಶ್ರೇಷ್ಟ ಕಾರ್ಯ ಮಾಡುತ್ತಿವೆ. ಇಂದಿನ ಮೊಬೈಲ್ ಸಂಸ್ಕೃತಿಯ ಪ್ರಭಾವ ಹೆಚ್ಚುತ್ತಿರುವ ಕಾಲದಲ್ಲಿ ಮಕ್ಕಳಿಗೆ ಬಾಲ್ಯದಿಂದಲೇ ಧರ್ಮ ಶಿಕ್ಷಣ ಅಗತ್ಯವಾಗಿದೆ. ಭಗವದ್ಗೀತೆ ಯಾವುದೇ ಒಂದು ಧರ್ಮಕ್ಕೆ ಸೀಮಿತವಲ್ಲ. ಅದು ಜೀವನದ ದಾರಿದೀಪವಾಗಿದೆ. ಪೋಷಕರು ಮಕ್ಕಳಿಗೆ ಗೀತೆಯ ಸಾರ ತಿಳಿಸಬೇಕು ಎಂದು ಕರೆ ನೀಡಿದರು.

ದೋಷಗಳು ಎಲ್ಲರಲ್ಲೂ ಇವೆ. ಆದರೆ ಅವನ್ನು ತಿದ್ದಿಕೊಳ್ಳುವ ಪ್ರಯತ್ನ ಮುಖ್ಯ. ಬಸವಣ್ಣನವರು ಹೇಳಿದಂತೆ, ತನ್ನ ದೋಷವ ತಾನು ನೋಡಿ, ಅನ್ಯರ ದೋಷವ ಎಣಿಸದಿದ್ದರೆ ಅದೇ ದೊಡ್ಡ ಗುಣ. ಸಮಾಜದಲ್ಲಿ ಶಾಂತಿ ನೆಲೆಸಬೇಕಾದರೆ ಮೊದಲು ನಮ್ಮಲ್ಲೇ ಬದಲಾವಣೆ ಬರಬೇಕು ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ತಾಲೂಕು ಲಯನ್ಸ್ ಅಧ್ಯಕ್ಷ ಗಿರೀಶ್ ಮಂಜು ವಹಿಸಿದ್ದರು. ಸತ್ಯ, ಸುಂದರ್, ಬಿ.ಕೆ. ಚಂದ್ರಿಕಾ, ಶಶಿ, ಶಿವಣ್ಣ ಮತ್ತಿತರರಿದ್ದರು.

# ಜಿನ್ನೇನಹಳ್ಳಿಯಲ್ಲಿ ಹಸುವಿಗೆ ಸೀಮಂತ ಸಂಭ್ರಮ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ತಾಲೂಕಿನ ಜಿನ್ನೇನಹಳ್ಳಿ ಗ್ರಾಮದಲ್ಲಿ ಶ್ರೀ ಕಾಲಭೈರವೇಶ್ವರ ಎಂಟರ್ಪ್ರೈಸಸ್ ಮತ್ತು ಗೋದ್ರೇಜ್ ಆಗ್ರೋವೆಟ್ ವತಿಯಿಂದ ಗರ್ಭಿಣಿ ಗೋಮಾತೆಗೆ ಗೌರವೋತ್ಸವ ಕಾರ್ಯಕ್ರಮದಡಿ ಹಸುವಿಗೆ ವಿಶೇಷವಾಗಿ ಸೀಮಂತ ಕಾರ್ಯ ಮಾಡಲಾಯಿತು.

ಜಿನ್ನೇನಹಳ್ಳಿ ಗೇಟ್ ಬಳಿಯಿರುವ ರೈತ ಕೇಶವಣ್ಣ ಎಂಬುವವರ ಎರಡು ಮಿಶ್ರತಳಿ ಸೀಮೆ ಹಸುಗಳ ಮೈತೊಳೆದು ಮೈಮೇಲೆ ಸೀರೆ ಹಾಕಿ ಹಣೆಗೆ ಅರಿಶಿನ ಕುಂಕುಮವಿಟ್ಟು ಕೊರಳಿಗೆ ಹೂವಿನ ಹಾರವನ್ನು ಹಾಕಿ ಸಿಂಗರಿಸಲಾಯಿತು.

ಬಳಿಕ ಟೇಬಲ್ ಮೇಲೆ ಫಲ-ಪುಷ್ಪಗಳು ಹಾಗೂ ವಿವಿಧ ಬಗೆಯ ಸಿಹಿ ತಿನಿಸುಗಳನ್ನು ಇರಿಸಿ ಸಿಂಗಾರಗೊಂಡಿರುವ ಗರ್ಭಿಣಿ ಹಸುಗಳನ್ನು ನಿಲ್ಲಿಸಿ ವಿಶೇಷ ಪೂಜೆ ಮಾಡುವ ಮೂಲಕ ಸೀಮಂತ ಕಾರ್ಯವನ್ನು ನೆರವೇರಿಸಲಾಯಿತು.

ಮಹಿಳೆಯರು ಹಸುಗಳ ಹಣೆಗೆ ಕುಂಕುಮ ಇಟ್ಟು ಅಕ್ಷತೆ ಹಾಕಿ ಹರಸಿದರು. ಹಿರಿಯ ತಾಯಂದಿರು ಸೋಬಾನ ಪದ ಹಾಡುವ ಮೂಲಕ ಸೀಮಂತ ಕಾರ್ಯಕ್ರಮಕ್ಕೆ ಮೆರಗು ನೀಡಿದರು. ಕಾರ್ಯಕ್ರಮದಲ್ಲಿ ಶ್ರೀ ಕಾಲಭೈರವೇಶ್ವರ ಟ್ರೇಡರ್ಸ್ ಮಾಲೀಕರಾದ ಜೆ.ಎಸ್.ಕಾರ್ತಿಕ್, ಜೆ.ಎಸ್. ಆಕರ್ಷ, ಗೋದ್ರೇಜ್ ಕಂಪನಿಯ ಬಿ.ವಿ.ಸುನಿಲ್, ಎನ್.ಶ್ರೀಕಂಠ, ಡಾ. ಕವಿತಾ, ಪ್ರಮುಖರಾದ ಸುದೀಪ್, ಪ್ರಶಾಂತ್, ಕೇಶವಣ್ಣ, ಮಂಜುನಾಥ್ ಇತರರಿದ್ದರು.

# ಕೆ.ಹೊಸೂರು ಗೇಟ್‌ನ ಪುಣ್ಯ ಧಾಮದಲ್ಲಿ ನಾಳೆ ಕೊಂಡೋತ್ಸವ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ತಾಲೂಕಿನ ಕೆ. ಹೊಸೂರು ಗೇಟ್‌ನಲ್ಲಿರುವ ಶ್ರೀಕ್ಷೇತ್ರ ಪುಣ್ಯಧಾಮದಲ್ಲಿ ಫೆ. 21ರ ಶನಿವಾರ ಶ್ರೀ ಶನೇಶ್ವರ ಹಾಗೂ ಶ್ರೀ ಜಡೆ ಮುನೇಶ್ವರ ಸ್ವಾಮಿಯ 28ನೇ ವರ್ಷದ ಕೊಂಡಥತ್ಸವ ಏರ್ಪಡಿಸಲಾಗಿದೆ ಎಂದು ಧರ್ಮಾಧಿಕಾರಿ ಶ್ರೀಧರ ಸ್ವಾಮೀಜಿ ಹೇಳಿದರು.





ಶನಿವಾರ ಮುಂಜಾನೆ ದೇಗುಲಗಳಿಗೆ ಹೂವಿನ ಚಪ್ಪರ ಕಾರ್ಯ ಜರುಗಲಿದ್ದು ಮೊದಲಿಗೆ ಶ್ರೀ ವಿಘ್ನೇಶ್ವರ ಹಾಗೂ ಗಂಗಾಪೂಜೆ ಬಳಿಕ ಶ್ರೀ ಶನೇಶ್ವರ ಸ್ವಾಮಿ ಮತ್ತು ಶ್ರೀ ಚಾಮುಂಡೇಶ್ವರಿ ಅಮ್ಮನವರಿಗೆ ಅಭಿಷೇಕ ನಡೆಯಲಿದೆ ಎಂದರು.

ಬೆಳಿಗ್ಗೆ 9.15 ಗಂಟೆಗೆ ಅಗ್ನಿಕೊಂಡ ಹಚ್ಚುವ ಪೂಜಾ ಕಾರ್ಯಕ್ರಮ, ಮಧ್ಯಾಹ್ನ 1 ಗಂಟೆಗೆ ಸುಗಮ ಸಂಗೀತ, ಮಧ್ಯಾಹ್ನ 2 ಗಂಟೆಗೆ ಕಳಸ ಪ್ರತಿಷ್ಠಾಪನೆ, ಮಂಗಳವಾದ್ಯದೊಂದಿಗೆ ಉತ್ಸವ ಸಮೇತ ಶ್ರೀ ಸ್ವಾಮಿಯವರನ್ನು ನಡೆಮುಡಿ ಮೆರವಣಿಗೆಯಲ್ಲಿ ಕರೆತರಲಾಗುವುದು ಎಂದು ತಿಳಿಸಿದರು. ಸಂಜೆ 5 ಗಂಟೆಗೆ ಬಾಳೆ ಕಂಬದ ಪೂಜೆ, ಅಗ್ನಿಕೊಂಡ ಪೂಜೆ ನಂತರ ಅಗ್ನಿಕೊಂಡ ಹಾಯುವ ಸೇವೆ ಕಾರ್ಯ ಜರುಗಲಿದ್ದು ಸಂಜೆ 7.30ಕ್ಕೆ ಧಾರ್ಮಿಕ ವೇದಿಕೆ ಕಾರ್ಯಕ್ರಮ ನಡೆಯಲಿದೆ. ಕ್ಷೇತ್ರದ ಶಾಸಕ ಸಿ.ಎನ್.ಬಾಲಕೃಷ್ಣ, ಮಾಜಿ ಎಂಎಲ್ಸಿ ಎಂ.ಎ.ಗೋಪಾಲಸ್ವಾಮಿ, ಕಾಂಗ್ರೆಸ್ ಮುಖಂಡ ಅಣತಿ ಆನಂದ್, ಜೆಡಿಎಸ್ ಮುಖಂಡ ಸಿ.ಎನ್.ಶಶಿಧರ್ ಭಾಗವಹಿಸಲಿದ್ದಾರೆ ಎಂದರು.

ರಾತ್ರಿ 9.30ಕ್ಕೆ ಹಾಸನದ ಶ್ರೀ ವಿನಾಯಕ ಡ್ರಾಮಾ ಸೀನರಿಯೊಂದಿಗೆ ಭವ್ಯ ರಂಗಸಜ್ಜಿಕೆಯಲ್ಲಿ ಬೆಂಗಳೂರಿನ ಶ್ರೀ ಹದ್ದಿನಕಲ್ಲು ಮಾರುತಿ ಕಲಾ ಬಳಗದ ವತಿಯಿಂದ ಕುರುಕ್ಷೇತ್ರ ಅಥವಾ ಶ್ರೀಕೃಷ್ಣ ಸಂಧಾನ ಎಂಬ ಪೌರಾಣಿಕ ನಾಟಕದ ಪ್ರದರ್ಶನ ಏರ್ಪಡಿಸಲಾಗಿದೆ ಎಂದರು.

ಉತ್ಸವದಲ್ಲಿ ಬೆಳಗಿಹಳ್ಳಿ ಹಾಗೂ ಹಿರೀಸಾವೆಯ ದಿ.ಕೃಷ್ಣಪ್ಪ ಮತ್ತು ತಂಡದವರಿಂದ ನಾದಸ್ವರ ವಾದ್ಯ, ಡೊಳ್ಳು ಕುಣಿತ, ಪೂಜಾ ಕುಣಿತ, ವೀರಗಾಸೆ ಹಾಗೂ ಮಂಡ್ಯ ಗಂಗಣ್ಣನವರ ತಂಡದಿಂದ ಕಂಸಾಳೆ ನೃತ್ಯ ಮೇಳೈಸಲಿದೆ ಎಂದು ತಿಳಿಸಿದರು.

ಪ್ರತಿವರ್ಷಕ್ಕಿಂತ ಈ ಬಾರಿ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಪಾಲ್ಗೊಳ್ಳಲಿದ್ದು ದೇವರ ದರ್ಶನ, ವಾಹನ ನಿಲುಗಡೆ, ಕುಡಿಯುವ ನೀರು ಹಾಗೂ ಅನ್ನದಾಸೋಹ ಸೇರಿದಂತೆ ಸಕಲ ವ್ಯವಸ್ಥೆಯನ್ನು ಅಚ್ಚುಕಟ್ಟಾಗಿ ರೂಪಿಸಲಾಗಿದೆ. ಭಕ್ತರು ಪಾಲ್ಗೊಂಡು ದೇವರ ಕೃಪೆಗೆ ಪಾತ್ರರಾಗಬೇಕು ಎಂದು ಕರೆ ನೀಡಿದರು.

# ರಾಜ್ಯಾದ್ಯಂತ ನಶಾ ಮುಕ್ತ ಕರ್ನಾಟಕ ಅಭಿಯಾನ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ಯುವ ಸಮಾಜ ಡ್ರಗ್ಸ್, ಗಾಂಜಾದಂತಹ ಅಫೀಮು ಪದಾರ್ಥಗಳ ದಾಸರಾಗುತ್ತಿರುವದು ಕಳವಳಕಾರಿ ವಿಷಯ ಎಂದು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿ ಬಿ.ಸಿ. ಭಗವಾನ್ ಹೇಳಿದರು.





ಸುದ್ದಿಗೋಷ್ಠಿಯಲ್ಲಿ ಗುರುವಾರ ಸ್ವಾಸ್ಥ್ಯ ಭಾರತ ಶ್ರೇಷ್ಠ ಭಾರತ ಕಾರ್ಯಕ್ರಮದ ಅಂಗವಾಗಿ ಮಾತನಾಡಿದ ಅವರು, ಮಾದಕ ವ್ಯಸನವು ಮಾದಕ ದ್ರವ್ಯಗಳನ್ನು ಬಳಸುವ ವ್ಯಕ್ತಿಗೆ ಮಾತ್ರ ಸೀಮಿತವಾಗಿಲ್ಲ. ಆದರೆ ಕುಟುಂಬ, ಸಮುದಾಯ ಮತ್ತು ಒಟ್ಟಾರೆಯಾಗಿ ಸಮಾಜಕ್ಕೂ ವಿಸ್ತರಿಸುತ್ತದೆ ಎಂದರು.

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ಮತ್ತು ದಿಶಾಭೋದ್ ಫೌಂಡೇಶನ್, ನಾರ್ಕೋಟಿಕ್ಸ್ ಕಂಟ್ರೋಲ್ ಬ್ಯೂರೋ ಮತ್ತು ಜೀವನ ಸಾರ್ಥಕತೆ ಸಂಸ್ಥೆಗಳ ಸಹಯೋಗದೊಂದಿಗೆ ಯುವಜನರಲ್ಲಿ ಮಾದಕವಸ್ತು ವ್ಯಸನ ಮುಕ್ತಗೊಳಿಸಲು ಮತ್ತು ಅಂಗಾಂಗ ದಾನದ ಮಹತ್ವ ತಿಳಿಸಲು ಟಿನಶಾ ಮುಕ್ತ ಭಾರತ, ಕರ್ನಾಟಕ, ಕ್ಯಾಂಪಸ್ ಹಾಗೂ ಅಂಗಾಂಗ ದಾನ ಅಭಿಯಾನಟಿಗಳನ್ನು ತೀವ್ರಗೊಳಿಸಲಾಗಿದೆ ಎಂದು ತಿಳಿಸಿದರು.

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನ ವಿವಿಗಳ ವ್ಯಾಪ್ತಿಯ 9 ಜಿಲ್ಲೆಗಳಲ್ಲಿ ಈಗಾಗಲೇ ಈ ಅಭಿಯಾನ ಆರಂಭಿಸಿದ್ದು, ಹಾಸನ ಜಿಲ್ಲೆ 10ನೇಯದಾಗಿದೆ. ಈಗಾಗಲೇ ಸುಮಾರು 45 ಸಾವಿರ ವಿದ್ಯಾರ್ಥಿಗಳನ್ನು ತಲುಪಿದ್ದು, ಫೆ. 27 ಮತ್ತು 28 ರಂದು ವಿಜಯಪುರ, ಬೆಳಗಾವಿ, ರಾಯಚೂರು ಜಿಲ್ಲೆಗಳಲ್ಲೂ ಅಭಿಯಾನ ನಡೆಸಲಾಗುವುದು ಎಂದರು.

ಇನ್ನೆರಡು ತಿಂಗಳಲ್ಲಿ ಎಲ್ಲ ಜಿಲ್ಲೆಗಳಲ್ಲೂ ಕಾತ್ಯಕ್ರಮ ರೂಪಿಸಿ ನಮ್ಮ ಆರೋಗ್ಯ ದೇಶದ ಆರೋಗ್ಯ ಎಂಬ ಸಂದೇಶ ಸಾರಲಾಗುವುದು. ಇಂತಹ ಅಭಿಯಾನಗಳಿಂದ ಮಾದಕ ದ್ರವ್ಯ ವಿರುದ್ಧದ ಹೋರಾಟಗಳನ್ನು ಮತ್ತಷ್ಟು ಶಕ್ತಿಯುತಗೊಳಿಸಬಹುದಾಗಿದೆ. ಈ ನಿಟ್ಟಿನಲ್ಲಿ ಜನಸಾಮಾನ್ಯರು ಅದರಲ್ಲೂ ಯುವ ಪೀಳಿಗೆ ಹೆಚ್ಚು ಗಮನ ಹರಿಸಬೇಕಿದೆ. ಇಂತಹ ಅಭಿಯಾನದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕಿದೆ. ಮಾದಕ ದ್ರವ್ಯವು ಬಳಕೆದಾರರಿಗೆ ಮಾತ್ರವಲ್ಲ ಅವರ ಕುಟುಂಬಗಳಿಗೆ ಮತ್ತು ಸಮಾಜಕ್ಕೂ ಮಾರಕವಾಗಿದೆ ಎಂಬ ಸಂದೇಶ ಎಲ್ಲರನ್ನೂ ತಲುಪಬೇಕಿದೆ ಎಂದು ಎಚ್ಚರಿಸಿದರು. ಸುದ್ದಿಗೋಷ್ಠಿಯಲ್ಲಿ ಸಿಂಡಿಕೇಟ್ ಸದಸ್ಯರಾದ ಡಾ. ಎಸ್.ಎ.ನಿತಿನ್, ಡಾ.ರಾಮಚಂದ್ರ ಪ್ರಭು, ಡಾ. ಮಧುಸೂದನ್, ಡಾ.ಓಬಳರೆಡ್ಡಿ, ನವೋದಯ ವಿದ್ಯಾ ಸಂಘದ ಅಧ್ಯಕ್ಷ ಸಿ.ಜೆ.ಮಂಜುನಾಥ್, ಕಾರ್ಯದರ್ಶಿ ಕೆ.ಪಿ. ಶರತ್ ಮತ್ತಿತರರಿದ್ದರು.

# ಬೇಲೂರಿನಲ್ಲಿ ಬೀದಿ ದೀಪಗಳ ಸಮಸ್ಯೆ ವಿಪರೀತ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೇಲೂರು: ಪಟ್ಟಣದ ಮುಖ್ಯ ರಸ್ತೆ ಹಾಗೂ ವಾರ್ಡ್‌ಗಳಲ್ಲಿ ಅಳವಡಿಸಿರುವ ಬೀದಿ ಕಂಬಗಳು ಸಾರ್ವಜನಿಕರಿಗೆ ಬೆಳಕು ನೀಡುವ ಬದಲು ಭಯ ಹುಟ್ಟಿಸುತ್ತಿವೆ.

ದೀಪಗಳ ನಿರ್ವಹಣೆ ಮತ್ತು ನಿಯಂತ್ರಣಕ್ಕಾಗಿ ಅಗತ್ಯ ಸ್ವಿಚ್ ವ್ಯವಸ್ಥೆ ಇಲ್ಲದಿರುವುದರಿಂದ ಅನೇಕ ಕಂಬಗಳು ನಿರಂತರವಾಗಿ ವಿದ್ಯುತ್ ಸಂಪರ್ಕ ಹೊಂದಿರುವ ಸ್ಥಿತಿಯಲ್ಲಿವೆ. ಪರಿಣಾಮ ಸಾರ್ವಜನಿಕರು ಹಾಗೂ ಜಾನುವಾರುಗಳು ಸಂಚರಿಸುವ ವೇಳೆ ಕಂಬಗಳಿಗೆ ಅಳವಡಿಸಿರುವ ವೈರ್ ತಾಗಿದರೆ ಅನಾಹುತ ಸಂಭವಿಸುವ ಭೀತಿ ಎದುರಾಗಿದೆ.

ಮುಖ್ಯವಾಗಿ ಹೊಳೆ ಬೀದಿ ಹಾಗೂ ಅದಕ್ಕೆ ಹೊಂದಿಕೊಂಡಿರುವ ಕನ್ನಿಕಾ ಪರಮೇಶ್ವರಿ ದೇವಾಲಯ ರಸ್ತೆ ಪ್ರದೇಶದಲ್ಲಿ ಸಮಸ್ಯೆ ಗಂಭೀರವಾಗಿದೆ. ಈ ರಸ್ತೆಯಲ್ಲಿ ಅಂಗನವಾಡಿ ಕೇಂದ್ರವೂ ಇರುವುದರಿಂದ ಮಕ್ಕಳ ಸುರಕ್ಷತೆ ಬಗ್ಗೆ



ಪೋಷಕರಲ್ಲಿ ಆತಂಕ ಹೆಚ್ಚಾಗಿದೆ. ಅಂಗನವಾಡಿ ಎದುರಿನ ಕಂಬದಲ್ಲಿ ಸ್ವಿಚ್ ಇಲ್ಲದೇ ತಂತಿಗಳು ಹೊರಗೆ ಎಳೆದಿರುವುದು ಕಂಡುಬಂದಿದೆ. ಇದೇ ರೀತಿ ಹೊಳೆ ಬೀದಿಯ ರಾಗಿ ಮಿಲ್‌ನ ಮುಂಭಾಗ, ಹಳೆ ಅಂಚೇರಿ ರಸ್ತೆ ಹಾಗು ತಿರುವು ರಸ್ತೆಗಳಲ್ಲಿಯೂ ಹಲವು ಕಂಬಗಳಲ್ಲಿ ರಕ್ಷಣಾ ಮುಚ್ಚಳವಿಲ್ಲದೆ ವೈರ್‌ಗಳು ಬಯಲಿಗೆ ಕಾಣಿಸುತ್ತಿವೆ.

ಈ ಭಾಗದಲ್ಲಿ ಹಲವು ಶಾಲಾ-ಕಾಲೇಜುಗಳಿದ್ದು, ಪ್ರತಿದಿನ ಸಾವಿರಾರು ವಿದ್ಯಾರ್ಥಿ ಹಾಗು ಸಾರ್ವಜನಿಕರು ಸಂಚರಿಸುತ್ತಾರೆ. ಇಂತಹ ಪ್ರಮುಖ ರಸ್ತೆಗಳಲ್ಲೇ ಸುರಕ್ಷತಾ ಕೊರತೆ ಕಂಡುಬರುತ್ತಿರುವುದು ಸಾರ್ವಜನಿಕರಲ್ಲಿ ಆಕ್ರೋಶಕ್ಕೆ ಕಾರಣವಾಗಿದೆ. ಇಂತಹ ಕಂಬಗಳಿಂದ ಅನಾಹುತ ಸಂಭವಿಸಿದರೆ ಯಾರು ಹೊಣೆ ಎಂಬುದು ನಾಗರಿಕರ ಪ್ರಶ್ನೆಯಾಗಿದೆ. ಪಟ್ಟಣದಲ್ಲಿ 150ಕ್ಕೂ ಹೆಚ್ಚು ಕಂಬಗಳಲ್ಲಿ ಇದೇ ರೀತಿಯ ಸಮಸ್ಯೆ ಇರುವುದಾಗಿ ತಿಳಿದುಬಂದಿದೆ. ಕೆಲವು ಕಂಬಗಳಲ್ಲಿ ರಕ್ಷಣಾ ಬಾಕ್ಸ್ ಇಲ್ಲದೇ ತಂತಿಗಳು ಹೊರಗೆ ಕಾಣಿಸುತ್ತಿರುವುದು ಮಕ್ಕಳಿಗೆ ಹಾಗೂ ಹಿರಿಯರಿಗೆ ಅಪಾಯಕಾರಿಯಾಗಿದೆ. ಅನಾಹುತ ಸಂಭವಿಸಿದಲ್ಲಿ ನಿರ್ವಹಣೆ ವಹಿಸಿಕೊಂಡಿರುವ ಗುತ್ತಿಗೆದಾರರು ಹಾಗೂ ಪುರಸಭೆ ನೇರ ಹೊಣೆಗಾರರಾಗಬೇಕಾಗುತ್ತದೆ ಎಂಬ ಅಭಿಪ್ರಾಯ ವ್ಯಕ್ತವಾಗಿದೆ.

ಈ ಕುರಿತು ಪುರಸಭೆ ಸದಸ್ಯ ಜಮಾಲುದ್ದೀನ್ ಮಾತನಾಡಿ, ಪುರಸಭೆ ವತಿಯಿಂದ ಯೋಗೇಶ್ ಅವರಿಗೆ ಬೀದಿ ದೀಪಗಳ ನಿರ್ವಹಣೆಯ ಗುತ್ತಿಗೆ ನೀಡಲಾಗಿದೆ. ಈಗಾಗಲೇ ನಾನು ಹಾಗು ಇತರ ಸದಸ್ಯರು ಗಮನಕ್ಕೆ ತಂದಿದ್ದೇವೆ. ನನ್ನ ವಾರ್ಡ್ ಮಾತ್ರವಲ್ಲದೆ 23 ವಾರ್ಡ್‌ಗಳಲ್ಲಿಯೂ ಇದೇ ಸಮಸ್ಯೆ ಇದೆ. ಏನಾದರೂ ಅನಾಹುತ ಸಂಭವಿಸಿದೆ ಗುತ್ತಿಗೆದಾರರೇ ನೇರ ಹೊಣೆಗಾರರಾಗುತ್ತಾರೆ. ಈ ವಿಷಯವನ್ನು ಪುರಸಭೆ ಸಭೆಯಲ್ಲಿ ಪುನಃ ಪ್ರಸ್ತಾಪಿಸಿ, ಶೀಘ್ರದಲ್ಲೇ ತ್ರಿಫೇಸ್ ವೈರ್ ಹಾಗು ಸ್ವಿಚ್ ವ್ಯವಸ್ಥೆಯನ್ನು ಸರಿಪಡಿಸುವಂತೆ ತಿಳಿಸುತ್ತೇನೆಂದರು.

# ನೀರಿನ ಟ್ಯಾಂಕ್‌ಗೆ ಬಿದ್ದು ಕಾರ್ಮಿಕ ಸಾವು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಕೆಲಸ ಮಾಡುತ್ತಿದ್ದಾಗಲೇ ಕಾರ್ಮಿಕ ನೀರಿನ ಟ್ಯಾಂಕ್‌ಗೆ ಬಿದ್ದು ಮೃತಪಟ್ಟಿರುವ ಘಟನೆ ನಗರದ ಕೈಗಾರಿಕಾ ಪ್ರದೇಸದಲ್ಲಿರುವ ಹಿಮತ್ ಸಿಂಗ್ ಕಾ ಗಾರ್ಮೆಂಟ್ಸ್ ಕಾರ್ಖಾನೆಯಲ್ಲಿ ನಡೆದಿದೆ.

ಅರಕಲಗೂಡು ತಾಲೂಕು ನೇರಳೆಹಳ್ಳಿ ಗ್ರಾಮದ ಎನ್. ಆರ್.ಪುನೀತ್ (28) ಮೃತರು. ಏಳು ತಿಂಗಳಿಂದ ಕೆಲಸಕ್ಕೆ ಸೇರಿದ್ದ ಪುನೀತ್ ಎಲೆಕ್ಟ್ರಿಷಿಯನ್ ಆಗಿ ಕೆಲಸ ಮಾಡಿಕೊಂಡಿದ್ದರು. ಬುಧವಾರ ಮಧ್ಯಾಹ್ನ 12ರ ಸಮಯದಲ್ಲಿ ಅವಘಡ ಸಂಭವಿಸಿದೆ. ಸಾವಿನ ಸುದ್ದಿ ತಿಳಿಯುತ್ತಿದ್ದಂತೆ ಪುನೀತ್‌ನ ಪೋಷಕರು, ಸಂಬಂಧಿಕರು ಹಾಗೂ ಹನುಮಂತಪುರ ನಿವಾಸಿಗಳು ಫ್ಯಾಕ್ಟರಿ ಮುಂದೆ ಜಮಾಯಿಸುತ್ತಿದ್ದಂತೆ



ಗ್ರಾಮಾಂತರ ಠಾಣೆ ಪೊಲೀಸರು ದೌಡಾಯಿಸಿ ಪರಿಸ್ಥಿತಿ ನಿಯಂತ್ರಿಸಿದರು.

ತಕ್ಷಣವೇ ಮೃತದೇಹವನ್ನು ಹಿಮ್ಸ್‌ಗೆ ರವಾನಿಸಿ ಮರಣೋತ್ತರ ಪರೀಕ್ಷೆಗೆ ಒಳಪಡಿಸಿದರು. ರಾತ್ರಿಪೂರ್ತಿ ಆಸ್ಪತ್ರೆ ಎದುರು ಕಾದು ಕುಳಿತಿದ್ದ ಮೃತ ಯುವಕನ ಸಂಬಂಧಿಕರು ಕಂಪನಿಯ ಮುಖ್ಯಸ್ಥರು ಸ್ಥಳಕ್ಕಾಗಮಿಸಿ ಸಾವಿಗೆ ಕಾರಣ ಹೇಳಬೇಕೆಂದು ಪಟ್ಟು ಹಿಡಿದರು. ಈ ಸಂಬಂಧ ಪೊಲೀಸರು ಹಾಗು ಸಾರ್ವಜನಿಕರ ನಡುವೆ ಜೋರು ವಾಗ್ವಾದ ನಡೆಯಿತು. ಗುರುವಾರ ಮಧ್ಯಾಹ್ನ 2ರ ಸಮಯದಲ್ಲಿ ಮೃತದೇಹವನ್ನು ಕುಟುಂಬಸ್ಥರಿಗೆ ಹಸ್ತಾಂತರಿಸಲಾಯಿತು.

ಪುನೀತ್ ಸಾವಿನ ವಿಚಾರ ತಿಳಿಯುತ್ತಿದ್ದಂತೆ ಸ್ಥಳಕ್ಕೆ ದೌಡಾಯಿಸಿದ ಗ್ರಾಮಾಂತರ ಠಾಣೆ ಪೊಲೀಸರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶುಭಾನ್ವಿತಾ ಅವರಿಗೆ ಮಾಹಿತಿ ನೀಡಿದ್ದಾರೆ. ಈ ಬಗ್ಗೆ ಮಾತನಾಡಿದ ಎಸ್‌ಪಿ ಶುಭಾನ್ವಿತಾ ಅವರು, ಘಟನಾ ಸ್ಥಳದಲ್ಲಿ ಸಿಸಿಟಿವಿ ಕ್ಯಾಮರಾ ಇಲ್ಲ. ಬಾಯ್ಲರ್‌ನಲ್ಲಿ ಮೃತದೇಹ ಪತ್ತೆಯಾಗಿದೆ. ಯುವಕನ ಸಾವಿಗೆ ನಿಖರ ಕಾರಣ ಏನೆಂಬುದು ಗೊತ್ತಿಲ್ಲವಾದ್ದರಿಂದ ಅಸಹಜ ಸಾವು ಪ್ರಕರಣ ದಾಖಲಿಸಿಕೊಂಡಿದ್ದೇವೆ. ಮರಣೋತ್ತರ ಪರೀಕ್ಷೆ ವರದಿ ಬಂದ ಬಳಿಕ ಮುಂದಿನ ತನಿಖೆ ಕೈಗೊಳ್ಳಲಾಗುವುದು ಎಂದರು.

# ಪರಿಶಿಷ್ಟರಿಗೆ ಸ್ಥಾನಮಾನ ನೀಡಲು ಆಗ್ರಹ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಜಿಲ್ಲೆ ಪರಿಶಿಷ್ಟ ಜಾತಿ-ಪಂಗಡದ ಕಾಂಗ್ರೆಸ್ ಮುಖಂಡರನ್ನು ಗುರುತಿಸಿ ನಾಮ ನಿರ್ದೇಶಿತ ಎಂಎಲ್‌ಸಿ ಸ್ಥಾನ ನೀಡಬೇಕು ಎಂದು ಹಿರಿಯ ಮುಖಂಡ ಹಾಗೂ ವಕೀಲ ಡಾ. ಮುನಿಸ್ವಾಮಿ ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಿಲ್ಲೆಯಲ್ಲಿ ನಾಲ್ಕೂವರೆ ಲಕ್ಷ ಪರಿಶಿಷ್ಟ ಮತಗಳಿದ್ದು, ಬಹುತೇಕರು ಕಾಂಗ್ರೆಸ್ ಪಕ್ಷ ಬೆಂಬಲಿಸಿದ್ದಾರೆ. ಇದೇ ಕಾರಣಕ್ಕೆ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಬಂದಿದೆ. ಆದರೆ ಈ ಸಮುದಾಯದ ಮುಖಂಡರಿಗೆ ಸರ್ಕಾರದಲ್ಲಿ ಸ್ಥಾನಮಾನ ನೀಡಲು ಸರ್ಕಾರ ವಿಫಲವಾಗಿದೆ ಎಂದು ಅಸಮಾಧಾನ ಹೊರ ಹಾಕಿದರು. ಇದರಿಂದ ಹಲವು ವರ್ಷಗಳಿಂದ ಪಕ್ಷಕ್ಕಾಗಿ ನಿಷ್ಠೆಯಿಂದ ದುಡಿಯುತ್ತಿರುವ ಮುಖಂಡರು




ಅಸಮಾಧಾನಗೊಂಡಿದ್ದಾರೆ. ಅವರಿಗೆ ಅನ್ಯಾಯವಾಗಿದೆ. ಈ ಸಂಬಂಧ ಸಿಎಂ, ಡಿಸಿಎಂ ಅವರ ಗಮನಕ್ಕೆ ತಂದರೂ ಯಾವುದೇ ಪ್ರಯೋಜನ ಆಗಿಲ್ಲ ಎಂದು ದೂರಿದರು.

ಜಿಲ್ಲೆಯಲ್ಲಿ ಬೇರೆ ಬೇರೆ ಸಮುದಾಯಗಳಿಗೆ ಜಿಲ್ಲಾಧ್ಯಕ್ಷ, ನಿಗಮ ಮಂಡಳಿ ಹೀಗೆ ಅಷ್ಟೋ ಇಷ್ಟೋ ಅವಕಾಶ ಕಲ್ಪಿಸಲಾಗಿದೆ. ಆದರೆ ದಲಿತ ಮುಖಂಡರನ್ನು ಪರಿಗಣಿಸಿಲ್ಲ. ಇನ್ನಾದರೂ ಸಾಮಾಜಿಕ ನ್ಯಾಯದ ಆಶಯವನ್ನು ಬಲಪಡಿಸುವ ನಿಟ್ಟಿನಲ್ಲಿ ಜಿಲ್ಲೆಯ ಪರಿಶಿಷ್ಟ ಜಾತಿ ಹಾಗೂ ಪಂಗಡದ ಮುಖಂಡರಿಗೆ ನಾಮ ನಿರ್ದೇಶಿತ ಎಂ.ಎಲ್.ಸಿ. ಸ್ಥಾನ ಸೇರಿ ರಾಜ್ಯ ಮತ್ತು ಜಿಲ್ಲಾ ಮಟ್ಟದ ನಾಮನಿರ್ದೇಶನ ಸ್ಥಾನಮಾನ ಕಲ್ಪಿಸಿಕೊಡಬೇಕು ಎಂದು ಒತ್ತಾಯಿಸಿದರು.

ಹೀಗೆ ಮಾಡಿದರೆ ಮುಂಬರುವ ಗ್ರಾಪಂ, ತಾಪಂ, ಜಿಪಂ, ಸ್ಥಳೀಯ ಸಂಸ್ಥೆ, 2028ರ ವಿಧಾನಸಭೆ, 2029ರ ಲೋಕಸಭೆ ಚುನಾವಣೆಗಳಲ್ಲಿ ಅನುಕೂಲ ಆಗಲಿದೆ. ಈ ಕುರಿತು ಮುಂದಿನ ದಿನಗಳಲ್ಲಿ ಜಿಲ್ಲಾದ್ಯಂತ ಸಭೆ ನಡೆಸಿ ಹೋರಾಟದ ರೂಪುರೇಷೆ ಸಿದ್ಧಪಡಿಸಲಾಗುವುದು ಎಂದರು.

ನಮ್ಮ ಹಕ್ಕು ನಮಗೆ ಕೊಡಬೇಕು. ಅದನ್ನು ಬಿಟ್ಟು ಬೇರೆಯವರಿಗೆ ಮಣೆ ಹಾಕಿದರೆ ಅದು ಸಾಮಾಜಿಕ ನ್ಯಾಯದ ವಿರುದ್ಧ ಆಗಲಿದೆ ಎಂದರು.

ಇದೇ ವೇಳೆ ಕಂದಾಯ ಸಚಿವರು ಇದ್ದಾಗಲೇ ಸಕಲೇಶಪುರದಲ್ಲಿ ಕಾಂಗ್ರೆಸ್‌ನ ಹಿರಿಯ ಮುಖಂಡ ಡಿ.ಸಿ.ಸಣ್ಣಸ್ವಾಮಿ ಅವರ ಮೇಲೆ ಕೈ ಮಾಡಿರುವುದನ್ನು ಖಂಡಿಸಿದ ಅವರು, ಈ ವಿಚಾರದಲ್ಲಿ ಪೊಲೀಸರು ನಡೆದುಕೊಂಡ ರೀತಿಗೆ ಆಕ್ರೋಶ ಹೊರ ಹಾಕಿದರು. ಪತ್ರಿಕಾಗೋಷ್ಠಿಯಲ್ಲಿ ಕಾಂಗ್ರೆಸ್ ಎಸ್‌ಟಿ ಘಟಕದ ಬಿ.ಡಿ.ದೊಡ್ಡರಂಗಯ್ಯ, ಮುಖಂಡರಾದ ಕುಮಾರಸ್ವಾಮಿ, ಆಲೂರು ರಂಗಯ್ಯ ಇದ್ದರು.

# ದುಶ್ಚಟಗಳಿಂದ ಜೀವನ ಹಾಳು ಮಾಡಿಕೊಳ್ಳುತ್ತಿರುವ ಯುವಕರು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಗಾಂಜಾ, ಡ್ರಗ್ಸ್ ಸೇರಿದಂತೆ ವಿವಿಧ ಮಾದಕ ವಸ್ತುಗಳಿಗೆ ಶಾಲಾ-ಕಾಲೇಜು ವಿದ್ಯಾರ್ಥಿಗಳ ತಮ್ಮ ಬದುಕನ್ನೇ ಹಾಳು ಮಾಡಿಕೊಳ್ಳುತ್ತಿರುವುದು ನೋವಿನ ಸಂಗತಿಯಾಗಿದೆ ಎಂದು ಸಂಸದರಾದ ಶ್ರೇಯಸ್ ಪಟೇಲ್ ಬೇಸರ ವ್ಯಕ್ತಪಡಿಸಿದರು.

ನಗರದ ಜಿಲ್ಲಾ ಕ್ರೀಡಾಂಗಣದ ಹಾಕಿ ಮೈದಾನದಲ್ಲಿ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಕರ್ನಾಟಕ ದಿಶಾ ಭೋದ್ ಫೌಂಡೇಶನ್ ಮತ್ತು ನಾರ್ಕೋಟಿಕ್ಸ್ ಕಂಟ್ರೋಲ್ ಬ್ಯೂರೋ ಸಹಯೋಗದೊಂದಿಗೆ ನಶಾ ಮುಕ್ತ ಭಾರತ, ನಶಾ ಮುಕ್ತ ಕರ್ನಾಟಕ ನಶಾ ಮುಕ್ತ ಕ್ಯಾಂಪಸ್, ಅಂಗಾಂಗ ದಾನ ಅಭಿಯಾನ ಮತ್ತು ಜಾಥಾ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಮುಂದಿನ ಪೀಳಿಗೆಗೆ ಆರೋಗ್ಯಕರ,



ಸುರಕ್ಷಿತ ವಾತಾವರಣ ನಿರ್ಮಾಣ ಮಾಡುವುದು ಹಾಗೂ ನಶಾ ಮುಕ್ತ ಸಮಾಜವನ್ನು ಸ್ಥಾಪಿಸುವುದು ನಮ್ಮೆಲ್ಲರ ಹೊಣೆ. ಇಂದಿನ ಕಾಲಘಟ್ಟದಲ್ಲಿ 8-10 ವರ್ಷದ ಮಕ್ಕಳೇ ಡ್ರಗ್ಸ್‌ಗೆ ಬಲಿಯಾಗುತ್ತಿರುವುದು ಸಮಾಜದ ಮುಂದಿನ ದೊಡ್ಡ ಯಕ್ಷ ಪ್ರಶ್ನೆಯಾಗಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಭಗವಂತ ಕೊಟ್ಟ ಶಕ್ತಿಯನ್ನು ಸಮಾಜದ ಒಳಿತಿಗೆ ಬಳಸಿದಾಗ ಮಾತ್ರ ಜೀವನ ಸಾರ್ಥಕವಾಗುತ್ತದೆ. ನಶಾಮುಕ್ತ ಕರ್ನಾಟಕ, ಶ್ರೇಷ್ಠ ಭಾರತ ನಿರ್ಮಾಣಕ್ಕೆ ಎಲ್ಲರೂ ಕೈಜೋಡಿಸಬೇಕು ಎಂದು ಕರೆ ನೀಡಿದರು.

ಶಾಸಕ ಹೆಚ್.ಪಿ. ಸ್ವರೂಪ್ ಮಾತನಾಡಿ, ನಶಾ ಮುಕ್ತ ಹಾಸನ ನಿರ್ಮಾಣಕ್ಕೆ ಯುವಕರು ಮುಂಚೂಣಿಯಲ್ಲಿ ಇರಬೇಕು. ಇನೊಬ್ಬರ ಜೀವಕ್ಕೆ ಅಂಗಾಂಗ ದಾನದ ಮೂಲಕ ನಾವು ಉಸಿರಾಗಬಹುದು, ಮಾದಕ ವಸ್ತುಗಳ ಮಾರಾಟ ಮತ್ತು ಬಳಕೆಯನ್ನು ಕಟ್ಟುನಿಟ್ಟಾಗಿ ತಡೆಯಲು ಎಲ್ಲರೂ ಸಹಕರಿಸಬೇಕು ಎಂದು ಹೇಳಿದರು.

ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಮಾತನಾಡಿ, ಭಾರತವೇ ಶ್ರೇಷ್ಠ ಭಾರತ, ಪ್ರತಿಯೊಂದು ಕುಟುಂಬವೂ ನಶಾಮುಕ್ತವಾಗಿರಬೇಕು ಎಂಬ ಸಂಕಲ್ಪ ಕೈಗೊಳ್ಳಬೇಕು ಎಂದು ತಿಳಿಸಿದರು.

ದೇಶವನ್ನು ದುರ್ಬಲಗೊಳಿಸಲು ಶತ್ರುಗಳು ಯುದ್ಧ ಮಾಡಬೇಕಾಗಿಲ್ಲ ನಶೆ ಹಬ್ಬಿಸಿದರೆ ಸಾಕು. ಜೀವನದಲ್ಲಿ ಸಾವು ಪ್ರತಿಯೊಬ್ಬರಿಗೂ ಅನಿವಾರ್ಯ ಎಂಬ ಸತ್ಯವನ್ನು ಅರಿಯಬೇಕು ಒಬ್ಬರ ಅಂಗಾಂಗ ದಾನದಿಂದ 8 ಜನರ ಜೀವ ಉಳಿಸಬಹುದು ಎಂದು ತಿಳಿಸಿದರು.

ಹಳೇಬೀಡು ಪುಷ್ಪಗಿರಿ ಮಠದ ಶ್ರೀ ಸೋಮಶೇಖರ ಸ್ವಾಮೀಜಿ ಮಾತನಾಡಿ, ವ್ಯಕ್ತಿಯ ಆರೋಗ್ಯದಷ್ಟೇ, ದೇಶದ ಆರೋಗ್ಯವೂ ಅತಿ ಮುಖ್ಯ. ನನ್ನ ಆರೋಗ್ಯದ ಜೊತೆಗೆ ಇತರರ ಆರೋಗ್ಯವನ್ನೂ ಕಾಪಾಡುತ್ತೇನೆ ಎಂಬ ಸಂಕಲ್ಪವನ್ನು ಪ್ರತಿಯೊಬ್ಬರೂ ಮಾಡಬೇಕು ಎಂದು ಹೇಳಿದರು.

ದಿಶಾ ಭೋದ್ ಫೌಂಡೇಶನ್ ನಿರ್ದೇಶಕ ಧ್ರುವಕುಮಾರ್, ಎಎಸ್ಪಿ ಶ್ರೀನಿಧಿ ಹಾಗೂ ಮತ್ತಿತರರು ಉಪಸ್ಥಿತರಿದ್ದರು.

# ಉಂಗರಗೆರೆ ಮಹಿಳಾ ಸಂಘಕ್ಕೆ ಸುವರ್ಣಮ್ಮ ಅಧ್ಯಕ್ಷೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ತಾಲ್ಲೂಕಿನ ಹಿರೀಸಾವೆ ಹೋಬಳಿ ಉಂಗರಗೆರೆ ಗ್ರಾಮದ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘದ ಅಧ್ಯಕ್ಷರಾಗಿ ಸುವರ್ಣಮ್ಮ ಅವಿರೋಧವಾಗಿ ಆಯ್ಕೆಯಾದರು. ಮುಂದಿನ ಐದು ವರ್ಷದ ಅವಧಿಗೆ ನಡೆದ ಚುನಾವಣಾ ಪ್ರಕ್ರಿಯೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಸುವರ್ಣಮ್ಮ ಹೊರತುಪಡಿಸಿ ಮತ್ಯಾರು ನಾಮಪತ್ರ ಸಲ್ಲಿಸದ ಕಾರಣ ಆಯ್ಕೆ ಘೋಷಿಸಲಾಯಿತು. ಸುವರ್ಣಮ್ಮ ಅವರು ಮಾತನಾಡಿ, ಹೈನುಗಾರಿಕೆಯನ್ನು ಅಳವಡಿಸಿಕೊಂಡಿರುವ ಅದೆಷ್ಟೋ ಮಹಿಳೆಯರು ತಮ್ಮ ಬದುಕನ್ನು ಸದೃಢವಾಗಿ ಕಟ್ಟಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆಂದರು. ಕೃಷಿಯ ಜೊತೆಗೆ ಉಪ ಕಸುಬಾಗಿ ಹೈನುಗಾರಿಕೆಯನ್ನು ಅಳವಡಿಸಿಕೊಳ್ಳದೆ ಇದ್ದಿದ್ದರೆ ರೈತ ವರ್ಗದ ಬದುಕು ಸಂಕಷ್ಟ ಎದುರಿಸಬೇಕಾಗಿತ್ತು. ಸದ್ಯ ಹೈನುಗಾರಿಕೆ ರೈತರ ಕೈ ಹಿಡಿದು ಬದುಕಿಗೆ ಆಸರೆಯಾಗಿದೆಯೆಂದು ತಿಳಿಸಿದರು.

ಹತ್ತಾರು ಹಸುಗಳನ್ನು ಸಾಕುವ ಮೂಲಕ ಹೈನುಗಾರಿಕೆಯಲ್ಲಿ ತೊಡಗಿರುವ ಕುಟುಂಬಗಳಿಗೆ ಸಾಲ ನೀಡಲು ಯಾರು ಸಹ ಹಿಂಜರಿಯುವುದಿಲ್ಲ. ಆರ್ಥಿಕ ಚೇತರಿಕೆ ವಿಚಾರದಲ್ಲಿ ಹೈನುಗಾರಿಕೆ ನಂಬಿಕೆಯ ಕಾಯಕವಾಗಿದೆ ಎಂದರು.

ಎಲ್ಲಾ ನಿರ್ದೇಶಕರ ಹಾಗೂ ಉತ್ಪಾದಕರ ವಿಶ್ವಾಸ ಪಡೆದು ಮೇಲಧಿಕಾರಿಗಳ ಸಹಕಾರದೊಂದಿಗೆ ಸಂಘದ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸಲಾಗುವುದು ಎಂದು ಭರವಸೆ ನೀಡಿದರು. ನೂತನ ಅಧ್ಯಕ್ಷೆ ಹಾಗೂ ನಿರ್ದೇಶಕರನ್ನು ಸಂಘದ ವತಿಯಿಂದ ಅಭಿನಂದಿಸಲಾಯಿತು. ಕಾರ್ಯದರ್ಶಿ ಶೋಭಾ, ನಿರ್ದೇಶಕರಾದ ನಯನ, ರೂಪ, ಯಶೋಧಮ್ಮ, ಶೃತಿ, ಧನುಶ್ರೀ, ಜಯಲಕ್ಷ್ಮಮ್ಮ, ಮೀನಾಕ್ಷಿ, ಪುಷ್ಪಲತಾ ಹಾಗೂ ಮತ್ತಿತರರಿದ್ದರು.

# ಯುವಸೇನಾ ಫೌಂಡೇಶನ್‌ನಿಂದ ಶ್ರಮದಾನ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಮಹಾಶಿವರಾತ್ರಿ ಪ್ರಯುಕ್ತ ಧರ್ಮಸ್ಥಳಕ್ಕೆ ಪಾದಯಾತ್ರೆ ತೆರಳಿದ ಭಕ್ತಾದಿಗಳು ರಸ್ತೆ ಬದಿ ಎಸೆದಿದ್ದ ಪ್ಲಾಸ್ಟಿಕ್ ಪದಾರ್ಥಗಳನ್ನು ಹಾಸನದ ಯುವಸೇನಾ ಫೌಂಡೇಶನ್ ಪದಾಧಿಕಾರಿಗಳು ಸಂಗ್ರಹಿಸಿ ಸ್ವಚ್ಛತೆಗೆ ಶ್ರಮಿಸಿದ್ದಾರೆ.

ಪ್ರತಿವರ್ಷ ಸಾವಿರಾರು ಭಕ್ತರು ರಾಜ್ಯದ ನಾನಾ ಮೂಲೆಗಳಿಂದ ಧರ್ಮಸ್ಥಳಕ್ಕೆ ಪಾದಯಾತ್ರೆ ಬರುತ್ತಾರೆ. ಮಾರ್ಗಮಧ್ಯೆ ನೀರಿನ ಬಾಟಲಿ, ಆಹಾರ ಪೊಟ್ಟಣ,




ಪ್ಲೇಟ್‌ಗಳನ್ನು ರಸ್ತೆಗೆ ಎಸೆಯುತ್ತಾರೆ. ಅದು ಪರಿಸರದ ಮೇಲೆ ವ್ಯಾಪಕ ಪರಿಣಾಮ ಬೀರುವುದನ್ನು ಅರಿತ ಯುವಸೇನಾ ಫೌಂಡೇಶನ್ ಪದಾಧಿಕಾರಿಗಳು, ಒಂದು ಆಟೋ ಮೂಲಕ ರಸ್ತೆಯುದ್ದಕ್ಕೂ ಸಂಚರಿಸಿ ಪ್ಲಾಸ್ಟಿಕ್ ಪದಾರ್ಥಗಳನ್ನು ಸಂಗ್ರಹಿಸಿದೆ.

ಹಾಸನದಿಂದ ಪ್ರಾರಂಭವಾದ ಈ ಕಾರ್ಯ ಬೇಲೂರು, ಚಾರ್ಮಾಡಿ ಘಾಟ್ ವರೆಗೆ ನಡೆಯಿತು. ರಸ್ತೆಯ ಎರಡೂ ಬದಿಯಲ್ಲಿ ಬಿದ್ದಿದ್ದ ತ್ಯಾಜ್ಯವನ್ನು ವಾಹನಕ್ಕೆ ತುಂಬಲಾಯಿತು. ಕೊಟ್ಟಿಗೆಹಾರ ತುರುವೆ ಗ್ರಾಮ ಪಂಚಾಯಿತಿ ಅಧ್ಯಕ್ಷ ರಘು, ಬಣಕಲ್ ಆರಿಫ್ ,ಯುವಸೇನಾ ಫೌಂಡೇಶನ್ ಅಧ್ಯಕ್ಷ ಪ್ರಭುಗೌಡ, ಉಪಾಧ್ಯಕ್ಷ ಜಗದೀಶ್, ಖಜಾಂಚಿ ಚೇತನ್, ಸೋಮು, ಮದನ್, ಹರೀಶ್ ಮತ್ತಿತರರಿದ್ದರು.

# ಇತಿಹಾಸದಲ್ಲಿ ಈ ದಿನ

## ಫೆಬ್ರವರಿ-20

1947: ಬ್ರಿಟನ್ ಪ್ರಧಾನಮಂತ್ರಿ Clement Attlee ಅವರು ಭಾರತಕ್ಕೆ ಸ್ವಾತಂತ್ರ್ಯ ನೀಡುವ ಬಗ್ಗೆ ಬ್ರಿಟಿಷ್ ಸಂಸತ್ತಿನಲ್ಲಿ ಘೋಷಣೆ ಮಾಡಿದರು.

1987: ಭಾರತದ ಈಶಾನ್ಯ ರಾಜ್ಯಗಳಾದ ಅರುಣಾಚಲ ಪ್ರದೇಶ ಮತ್ತು (ಮಿಜೋರಂ) ಪೂರ್ಣ ಪ್ರಮಾಣದ ರಾಜ್ಯಗಳು ಆಗಿ ಘೋಷಿಸಲ್ಪಟ್ಟವು.

1962: ಅಮೆರಿಕಾದ ಅಂತರಿಕ್ಷ ಯಾತ್ರಿಕ John Glenn ಭೂಮಿಯನ್ನು ಪ್ರದಕ್ಷಿಣೆ ಹೊಡೆದ ಮೊದಲ ಅಮೆರಿಕನ್ನಾದರು.

**ಜನನ**

1967: Kurt Cobain, ಅಮೆರಿಕನ್ ಗಾಯಕ ಹಾಗೂ ನಿರ್ವಾಣಾ ಸಂಗೀತ ಬಳಗದ ಮುಖ್ಯ ಗಾಯಕ

1894: Jaroslav Heyrovský ನೊಬೆಲ್ ಪ್ರಶಸ್ತಿ ವಿಜೇತ ರಸಾಯನ ಶಾಸ್ತ್ರಜ್ಞ

**ನಿಧನ**

1939: Abanindranath Tagore ಪ್ರಸಿದ್ಧ ಭಾರತೀಯ ಚಿತ್ರಕಾರ

1963: Rajendra Prasad ಭಾರತದ ಮೊದಲ ರಾಷ್ಟ್ರಪತಿ

# ಬೇಡ ಪರೀಕ್ಷೆ ಭಯ



**- ಪ್ರಶಾಂತ್.ಎನ್.ಆರ್. ಆಪ್ತ ಸಲಹಾ ಮನಃಶಾಸ್ತ್ರಜ್ಞರು, ಮೊ: 9481545719**

ಭಾಗ-2

ಪ್ರೀತಿಯ ವಿದ್ಯಾರ್ಥಿಗಳೆ, ಏಕಾಗ್ರತೆಯನ್ನು ಸಾಧಿಸಿದ ನಂತರ ಸ್ಮೃತಿತಂತ್ರ(ನಿಮೋನಿಕ್ಸ್)ಗಳ ಮೂಲಕ ನೆನಪಿನ ಶಕ್ತಿಯನ್ನುಹೆಚ್ಚಿಸಿಕೊಳ್ಳುವುದು ಹೇಗೆ ಎಂದು ತಿಳಿದುಕೊಳ್ಳೋಣ. ಗ್ರೀಕ್ ಭಾಷೆಯಲ್ಲಿ ನಿಮೊನಿಕ್ಸ್ ಎಂದರೆ ಸ್ಮೃತಿ ತಂತ್ರಗಳು ಎಂದರ್ಥ. ಇವು ನೆನಪಿನ ಶಕ್ತಿಯನ್ನು ಹೆಚ್ಚಿಸಿಕೊಳ್ಳಲು ಅನುಕೂಲಕರವಾಗಿವೆ. ಪ್ರಾಸಬದ್ಧ ಕಲಿಕೆ, ರೈಮಿಂಗ್ ವರ್ಡ್ಸ್‌ಗಳು ನೆನಪಿನಲ್ಲಿ ಉಳಿಯುತ್ತವೆ. ಉದಾಹರಣೆಗೆ ಏಪ್ರಿಲ್, ಜೂನ್, ಸೆಪ್ಟಂಬರ್, ನವಂಬರ್ ತಿಂಗಳುಗಳು 30 ದಿನಗಳನ್ನು ಒಳಗೊಂಡಿವೆ. ಫೆಬ್ರವರಿ ಹೊರತಾಗಿ ಉಳಿದ ತಿಂಗಳುಗಳು 31 ದಿನಗಳನ್ನು ಹೊಂದಿವೆ. ಹಾಗೆಯೇ ನಾವು ಅಧ್ಯಯನ ಮಾಡುತ್ತಿರುವ ವಿಷಯದ ಪರಿಕಲ್ಪನೆಯನ್ನು ಮನಸ್ಸಿನಲ್ಲಿ ಚಿತ್ರಿಸಿಕೊಳ್ಳುವುದು, ಒಂದು ಕಾಗದದ ಮೇಲೆ ಪರಿಕಲ್ಪನೆಯ ಚಿತ್ರ ಬಿಡಿಸುವುದು, ಇತ್ಯಾದಿಗಳ ಮೂಲಕ ನೆನಪಿನ ಶಕ್ತಿಯನ್ನು ಹೆಚ್ಚಿಸಿಕೊಳ್ಳಬಹುದು.

ವಿಷಯಗಳನ್ನು ವ್ಯವಸ್ಥಿತಗೊಳಿಸುವುದು ಅಥವಾ ಸಂಕ್ಷಿಪ್ತಗೊಳಿಸುವುದರ ಮೂಲಕ ಅಂದರೆ, ಉದ್ದವಾದ ಮಾಹಿತಿಯನ್ನುಚಿಕ್ಕ, ಚಿಕ್ಕ ಅರ್ಥಪೂರ್ಣವಾದ ವಿಷಯಗಳಾಗಿ ಪರಿವರ್ತಿಸಿಕೊಳ್ಳುವುದು, ಇದರಿಂದ ಚಿಕ್ಕರೂಪದ ವಿಷಯಗಳನ್ನು ನೋಡಿದಾಗ ಪೂರ್ಣ ಮಾಹಿತಿ ನೆನಪಿಗ ಬರುತ್ತದೆ. ಉದಾಹರಣೆಗೆ ಐಆಎಣಖ್ಕಿ, ಖಿಘೆಉಖಇಣ, ಖಿಘೆಐಇಉಊ ಇತ್ಯಾದಿ.

ಹೊಸದಾಗಿ ಕಲಿತ ವಿಷಯವನ್ನು ನೆನಪು ಮಾಡಿಕೊಳ್ಳುವಾಗ ಕೆಲವು ಸುಳಿವು (ಕ್ಲೂ)ಗಳ ಜೊತೆ ಜೋಡಿಸಿದರೆ ನೆನಪು ಮಾಡಿಕೊಳ್ಳುವುದು ಸುಲಭವಾಗುತ್ತದೆ. ಉದಾಹರಣೆಗೆ, ಸರೀಸೃಪಗಳು(ರೆಪ್ಟೈಲ್ಸ್) ಮತ್ತು ಸಸ್ತನಿಗಳ (ಮ್ಯಾಮಲ್ಸ್) ನಡುವೆ ಇರುವ ವ್ಯತ್ಯಾಸ ಗುರುತಿಸುವಾಗ ಪ್ರಮುಖ ಸುಳಿವು ಎಂದರೆ ಸಸ್ತನಿಗಳು ತಮ್ಮ ಮರಿಗಳಿಗೆ ಹಾಲುಣಿಸುತ್ತವೆ. ಆದರೆ ಸರೀಸೃಪಗಳು ಹಾಲುಣಿಸುವುದಿಲ್ಲ. ಈ ರೀತಿಯ ಮುಖ್ಯವೆನಿಸುವ ಸುಳಿವುಗಳು ವಿಸ್ತಾರವಾದ ವಿವರಣೆಗಳನ್ನು ನೆನಪಿನಲ್ಲಿಟ್ಟುಕೊಳ್ಳಲು ಸಹಾಯ ಮಾಡುತ್ತವೆ.

ಹಿಂದೆ ಕಲಿತಂತ ವಿಷಯಗಳನ್ನು ಪ್ರಸ್ತುತ ಕಲಿಯುತ್ತಿರುವ ವಿಷಯಗಳ ಜೊತೆ ಹೊಂದಿಸಿ ನೆನಪಿನಲ್ಲಿಟ್ಟುಕೊಳ್ಳುವುದರಿಂದ ಒಂದು ವಿಷಯವನ್ನು ನೆನಪು ಮಾಡಿಕೊಂಡರೆ ಮತ್ತೊಂದು ವಿಷಯವೂ ನೆನೆಪಿಗೆ ಬರುತ್ತದೆ.

ಕಲಿಯುವ ವಿಷಯ ಚಿಕ್ಕದಾಗಿದ್ದು ಸುಲಭವಾಗಿದ್ದರೆ, ಪದ್ಯದಂತೆ ನಾಲ್ಕು ಅಥವಾ ಐದು ಪ್ಯಾರ ಅಥವಾ ಸ್ಟಾಂಜಗಳಿದ್ದರೆ ಒಂದೇ ಬಾರಿಗೆ ಓದಿ ಅರ್ಥೈಸಿಕೊಳ್ಳಬೇಕು. ಕಲಿಯುವ ವಿಷಯವು ತುಂಬಾ ಉದ್ದವಿದ್ದು, ಕಷ್ಟಕರವಾಗಿದ್ದರೆ ಮಧ್ಯೆ ಮಧ್ಯೆ ವಿರಾಮ ತೆಗೆದುಕೊಂಡು ಓದಿದರೆ ಚೆನ್ನಾಗಿ ಮನಮುಟ್ಟುತ್ತದೆ. ಓದುವುದರ ಮಧ್ಯೆ ವಿರಾಮ ತೆಗೆದುಕೊಳ್ಳುವುದರಿಂದ ಆಯಾಸವಾಗಲಿ ಬೇಸರವಾಗಲಿ ಆಗುವುದಿಲ್ಲ.

ಕಲಿಯುವ ವಿಷಯ ಆಸಕ್ತಿಯುತವಾಗಿದ್ದರೆ ಅದನ್ನು ಪ್ರಾರಂಭದಿಂದ ಅಂತ್ಯದವರೆಗೂ ಸಂಪೂರ್ಣವಾಗಿ ಓದಿ ಅರ್ಥಮಾಡಿಕೊಳ್ಳುವುದು ಒಳ್ಳೆಯದು. ಆದರೆ ಅಧ್ಯಯನದ ವಿಷಯ ಕಷ್ಟಕರವಾಗಿದ್ದರೆ ನಮ್ಮ ಅನುಕೂಲಕ್ಕೆ ತಕ್ಕಂತೆ ಚಿಕ್ಕಚಿಕ್ಕ ಭಾಗಗಳಾಗಿ ವಿಂಗಡಿಸಿ ಒಂದೊಂದು ಭಾಗವನ್ನು ಚೆನ್ನಾಗಿ ಅರ್ಥಮಾಡಿಕೊಂಡು ಕಲಿಯುವುದು ಒಳ್ಳೆಯದು.

ಕಠಿಣವೆನಿಸುವ ವಿಷಯವನ್ನು ಪದೇ ಪದೇ ಬರೆದು ಕಲಿಯಬೇಕಾಗುತ್ತದೆ. ಇದರಿಂದ ಕಲಿತ ವಿಷಯ ಚೆನ್ನಾಗಿ ನೆನಪಿನಲ್ಲಿಟ್ಟುಕೊಳ್ಳಲು ಸಹಾಯಕವಾಗುತ್ತದೆ. ಹಾಗೆಯೆ ಕೆಲವು ವಿಷಯಗಳನ್ನು ಆಗಾಗ್ಗೆ ನೆನಪು ಮಾಡಿಕೊಳ್ಳುತ್ತಿರಬೇಕು. ಇದಕ್ಕಾಗಿ ಸ್ನೇಹಿತರೊಡನೆ ಚರ್ಚಿಸುವುದು, ವಿವರಿಸುವುದು, ಗುಂಪು ಅಧ್ಯಯನ ಸಹಕಾರಿಯಾಗಿರುತ್ತದೆ.

### ಹೇಗೆ ಮತ್ತು ಏಕೆ ಮರೆಯುತ್ತೇವೆ?

ಕಲಿತ ವಿಷಯವನ್ನು ಬಹಳ ದಿನಗಳ ಕಾಲ ಮತ್ತೆ ನೆನಪಿಸಿಕೊಳ್ಳದಿದ್ದರೆ ಕ್ರಮೇಣ ಮರೆತು ಹೋಗುತ್ತೇವೆ. ಕಲಿಯುವ ವಸ್ತು ವಿಷಯ ಅರ್ಥಹೀನವಾಗಿದ್ದರೆ, ನೀರಸವಾಗಿದ್ದರೆ ಮರೆತುಹೋಗುತ್ತದೆ. ಕಲಿಯುವ ವಿಷಯ ಕ್ರಮಬದ್ಧವಾಗಿರದಿದ್ದರೆ, ಕಲಿಯುವ ಸಮಯದಲ್ಲಿ ಏಕಾಗ್ರತೆ ಇರದಿದ್ದರೆ, ಕಲಿಯಲು ಆಸಕ್ತಿ ಇರದಿದ್ದರೆ ಹಾಗು ಕಲಿಯಲು ಪೂರ್ವಸಿದ್ಧತೆ ಇರದಿದ್ದರೆ ಮರೆವು ಉಂಟಾಗುತ್ತದೆ. ಮನಸ್ಸು ಉದ್ರೇಕಕ್ಕೆ ಅಂದರೆ ಕೋಪ, ಭಯ, ದುಃಖ ಇತ್ಯಾದಿಗಳಿಗೆ ಒಳಗಾಗಿದ್ದಾಗ ಕಲಿತರೆ ಮಾನಸಿಕ ಚಟುವಟಿಕೆಗಳಲ್ಲಿ ಏರುಪೇರಾಗಿ ಮರೆವು ಉಂಟಾಗುತ್ತದೆ. ನಿಮಗೆಲ್ಲರಿಗೂ ಹಿಂದಿನ ಪರೀಕ್ಷಾ ಸಮಯದಲ್ಲಿ ಒಂದು ಅನುಭವವಾಗಿರುತ್ತದೆ, ಅದೆಂದರೆ, ಪರೀಕ್ಷೆಯಲ್ಲಿ ಯಾವುದೋ ಒಂದು ವಿಷಯದ ಪ್ರಶ್ನೆಗೆ ಉತ್ತರಿಸುವಾಗ ಮತ್ತೊಂದು ವಿಷಯದ ಉತ್ತರ ನಮ್ಮ ಮನಸ್ಸಿಗೆ ಬಂದು ಗೊಂದಲವನ್ನುಂಟು ಮಾಡುತ್ತದೆ. ಒಂದು ಪ್ರಶ್ನೆಗೆ ಉತ್ತರವನ್ನುಯೋಚಿಸುವಾಗ ಮತ್ತೊಂದು ಉತ್ತರ ನಮ್ಮ ಮನಸ್ಸಿನಲ್ಲಿ ಸುಳಿಯುತ್ತದೆ. ಏಕೆ ಹೀಗಾಗುತ್ತದೆ? ಏಕೆಂದರೆ, ನಾವು ಒಂದು ವಿಷಯವನ್ನುಅಧ್ಯಯನ ಮಾಡುವಾಗ ಮತ್ತೊಂದು ವಿಷಯವನ್ನು ಯೋಚಿಸುತ್ತಿರುತ್ತೇವೆ. ಆದುದರಿಂದ ಯಾವುದೇ ಅಧ್ಯಯನದ ವಿಷಯವನ್ನು ಕಲಿಯುವಾಗ ಮತ್ತೊಂದು ಅಧ್ಯಯನ ವಿಷಯವನ್ನಾಗಲಿ ಅಥವಾ ಬೇರೆನನ್ನಾದರೂ ಯೋಚಿಸದೆ ಕಲಿಯುವ ವಿಷಯವನ್ನುಏಕಾಗ್ರತೆಯಿಂದ ಪೂರ್ಣ ಮನಸ್ಸಿನಿಂದ ಕಲಿಯಬೇಕು.

ಮತ್ತೊಂದು ಅನುಭವದ ಬಗ್ಗೆ ತಿಳಿಯೋಣ, ಪರೀಕ್ಷಾ ಕೊಠಡಿಯಲ್ಲಿ ಕುಳಿತು ಪ್ರಶ್ನೆಗಳಿಗೆ ಉತ್ತರಿಸುವಾಗ ಕೆಲವೊಮ್ಮೆ ಯಾವುದೋ ಒಂದು ದಿನಾಂಕ, ಪದ, ಚಿಕ್ಕ ವಾಕ್ಯ ನೆನಪಿಗೆ ಬರುವುದಿಲ್ಲ. ಎಷ್ಟೇ ಪ್ರಯತ್ನಿಸಿದರೂ ಆ ಒಂದು ಉತ್ತರ ನೆನಪಿಗೆ ಬರುವುದಿಲ್ಲ. ಕೊನೆಗೆ ಉತ್ತರ ಪತ್ರಿಕೆಯನ್ನು ಕೊಠಡಿ ಮೇಲ್ವಿಚಾರಕರಿಗೆ ಕೊಟ್ಟು ಪರೀಕ್ಷಾ ಕೊಠಡಿಯಿಂದ ಹೊರಬಂದಾಗ, ತಕ್ಷಣ, ಕೆಲವೊಮ್ಮೆ ಸ್ವಲ್ಪ ಸಮಯದ ನಂತರ ತಟ್ಟನೆ ನೆನಪಿಗೆ ಬರುತ್ತದೆ. ಏಕೆ ಹೀಗಾಗುತ್ತದೆ? ಏಕೆಂದರೆ, ಪರೀಕ್ಷಾ ಕೊಠಡಿಯಲ್ಲಿ ಕುಳಿತಿರುವಷ್ಟು ಕಾಲ ನೀವು ಭಯ ಹಾಗು ಆತಂಕದಲ್ಲಿರುವಿರಿ. ಮನಸ್ಸಿನ ಮರ್ಮವೆಂದರೆ ಇಂತಹ ಸಮಯದಲ್ಲಿ ಕೆಲವು ಕಲಿತ ವಿಷಯಗಳು ನೆನಪಿಗೆ ಬರುವುದಿಲ್ಲ, ಆದರೆ ಪರೀಕ್ಷಾ ಕೊಠಡಿಯಿಂದ ಹೊರಬರುತ್ತಿದ್ದಂತೆ ನಿರಾಳವಾಗುತ್ತದೆ. ಮನಸ್ಸು ಸಮಾಧಾನ ಸ್ಥಿತಿಗೆ ಬರುವುದುರಿಂದ ಉತ್ತರ ತಟ್ಟನೆ ಹೊಳೆಯುತ್ತದೆ. ಮನೋವೈಜ್ಞಾನಿಕ ಅಧ್ಯಯನಗಳಿಂದ ತಿಳಿದು ಬರುವುದೇನೆಂದರೆ ವಿದ್ಯಾರ್ಥಿಗಳಿಗೆ ಸ್ವಲ್ಪ ಮಟ್ಟಿನ ಭಯ, ಆತಂಕ, ಉದ್ವೇಗವಿರಬೇಕು. ಪರೀಕ್ಷಾ ಭಯವಿಲ್ಲದಿದ್ದರೆ, ಪರೀಕ್ಷಾ ವಿಷಯದಲ್ಲಿ, ಬೇಜವಬ್ದಾರಿ, ನಿರ್ಲಕ್ಷತೆ, ಉದಾಸೀನತೆ ಕಾಣಿಸಿಕೊಳ್ಳುತ್ತದೆ. ಆದುದರಿಂದ ಸ್ವಲ್ಪ ಮಟ್ಟಿನ ಭಯ, ಆತಂಕ, ಪರೀಕ್ಷೆಗೆ ತಯಾರಾಗುವ ಸಮಯದಲ್ಲಿ ಇರಬೇಕು. ಇವು ವ್ಯಕ್ತಿಯ ಕಾರ್ಯದಕ್ಷತೆಯನ್ನು ಹೆಚ್ಚಿಸಲು ಸಹಾಯ ಮಾಡುತ್ತವೆ. ಆದರೆ ಪರೀಕ್ಷಾ ಕೊಠಡಿಯಲ್ಲಿ ಯಾವುದೆ ಭಯ ಅಥವಾ ಆತಂಕಕ್ಕೆ ಒಳಗಾಗಬಾರದು.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248